
ಬಹಳ ಕಾಡೋದು. ಆ ಮಗುವಿನ ಕಥೆ ಏನು? ನನ್ನ ಸುತ್ತಮುತ್ತಲ ಊರುಗಳಲ್ಲಿ ಇಂತಹ ಮಕ್ಕಳು ಎಷ್ಟು ಇರಬಹುದು ಅಂತ ಕಾಡತೊಡಗಿತು. ಆಮೇಲೆ ನನ್ನ ಜೀವನದ ಒಂದು ಅನಾಥತೆಯೂ ಕಾರಣವಾಗಿ, ಅಂತವರಿಗಾಗಿ ಏನಾದರು ಮಾಡಬೇಕು ಅನಿಸ್ತು. ಆಗ ಹುಟ್ಟಿಕೊಂಡದ್ದೆ 'ಬೀದಿ ಮಕ್ಕಳು' ಅಂತ. ಆಮೇಲೆ ಅದು 'ನಮ್ಮ ಮಕ್ಕಳು' ಅಂತ ಆಗಿದ್ದು. ಇದಕ್ಕೆಲ್ಲಾ ಸಿದ್ಧಗಂಗಾ ಮಠದಲ್ಲಿ ಓದಿದ್ದರಿಂದ ಶಿವಕುಮಾರ ಸ್ವಾಮೀಜಿಗಳ ಪ್ರಭಾವವೂ ಇತ್ತು. ಬಹಳ ನಿಂದೆಗಳೂ ಸಹ ಬಂದವು. ಈ ದೂದೇಕ್ಲ, ಲಡಾಫ಼ಿ ಅಂತ ಮುಸ್ಲಿಮ್ಮರಲ್ಲಿ ಕೆಲವರಿದ್ದಾರೆ. ಮುಸ್ಲಿಮ್ ದಲಿತರವರು. ಅಂತಹ ಮಕ್ಕಳನ್ನು ಇಟ್ಟುಕೊಂಡಾಗ ಸಾಕಷ್ಟು ಟೀಕೆ, ನಿಂದೆಗಳನ್ನು ಕೇಳಬೇಕಾಯಿತು; ಸಹಿಸಬೇಕಿತ್ತು.



ಇನ್ನೂ ಕೆಲವರು ಯಾರಿಗೋ ಹುಟ್ಟಿದ ಮಕ್ಕಳ ಬಗ್ಗೆ ನಿಮಗ್ಯಾಕೆ ಕಾಳಜಿ ಅನ್ನೋರು. ಬಸವಣ್ಣನನ್ನ ಓದಿಕೊಂಡಿದ್ದರಿಂದ ಇದನ್ನೆಲ್ಲಾ ಮೀರಲು ಸಾಧ್ಯವಾಯಿತು. ಮುಂದಿನ ವರ್ಷಕ್ಕೆ 'ನಮ್ಮ ಮಕ್ಕಳು' ಸಂಸ್ಥೆಗೆ ಮೂವತ್ತು ತುಂಬುತ್ತೆ. ನಾನೂ ಮುಪ್ಪಾಗ್ತಿದೇನೆ. ಈಗ ಆರು ಮಕ್ಕಳಿದಾವೆ. ಸಾಕು ನಿಲ್ಲಿಸೋಣ ಅನಿಸ್ತಿದೆ.

ಕಾಡಲ್ಲಿ ಅಲೆದಾಡಿಕೊಂಡಿರೋ ಜನಗಳ ಕಡೆ ಗಮನ ಹೋಯ್ತು. ಅವರನ್ನೆಲ್ಲಾ ಒಟ್ಟುಗೂಡಿಸಿ 'ಹಸಿರು ಹೊನ್ನೂರು' ಅಂತ ಮಾಡಿದಿವಿ. ಆ ಮಕ್ಕಳಿಗೆ ಶಾಲೆ ಮಾಡಬೇಕು ಅಂತ ಅನಿಸಿದಾಗ 'ಕಲಿಕೆಯ ಮಡಿಲು' ಹುಟ್ಟಿಕೊಂಡದ್ದು. ಆಮೇಲೆ ತೊಗಲು ಗೊಂಬೆ ಕಲಾವಿದರ ಸಂಘ ಅಂತ ಮಾಡೋದಕ್ಕೆ ಹೊರಟೆ. ಈ ಅಲೆಮಾರಿ ಜನಗಳನ್ನು ಸಂಘಟಿಸೋದು ಇದೆಯಲ್ಲ, ಅದು ಅಷ್ಟು ಸುಲಭದ ಕೆಲಸ ಅಲ್ಲ. ಬಹಳ ತಾಳ್ಮೆ ಬೇಕು. ನನಗೆ ಹಕ್ಕಿಪಿಕ್ಕಿ ಜನಗಳ ಜೊತೆ ದೊಡ್ಡ ಅನುಭವ ಆಗಿದೆ. ಕೆಲವು ವೇಳೆ ನನಗೆ ಕಳ್ಳನನ್ನ ತಡೆಯಲು ಆಗಲಿಲ್ಲ, ಕಳ್ಳತನವನ್ನೂ ತಡೆಯಲಾಗಲಿಲ್ಲ. ಆದರೆ ಕೆಲವು ಕಂಗಳಲ್ಲಿ ಕನಸುಗಳು ಕಂಡವು. ಆ ಕಂಗಳನ್ನು ಅರ್ಥ ಮಾಡಿಕೊಂಡರೆ ಎಷ್ಟು ಅದ್ಭುತವಾದ ಅನುಭವ ಗೊತ್ತೆ! ಆದ್ದರಿಂದ ಏನು ಕಷ್ಟ ನಷ್ಟ ಅನುಭವಿಸಿದೆ ಅನ್ನೋದು ನನಗೆ ಮುಖ್ಯವೇ ಅಲ್ಲ. ಇವತ್ತಿಗೂ ಕಾಡಿನ ಅಲೆಮಾರಿ ಜನಗಳಲ್ಲಿ ಪಶುಸಂಗೋಪನೆಯನ್ನು ಸಂಘಟಿಸೋ ಹೊತ್ತಿನಲ್ಲಿ 'ಕಾಡು ಮನುಷ್ಯರ ಜೊತೆ ಕಾಡು ಮನುಷ್ಯ' ಅನ್ನೋ ನಿಂದೇನ ಮನೆಯವರಿಂದಲೇ ಕೇಳಬೇಕಾಯಿತು. ಆ ಬಗ್ಗೆ ನನಗೆ ಹೆಮ್ಮೆ ಇದೆ. ಯಾಕೆ ಅಂದ್ರೆ ಕಾಡು ಮನುಷ್ಯನಾಗೋದು ಅಂದ್ರೆ ಅವರ ನಡುವಿನಲ್ಲಿ ಒಬ್ಬನಾಗೋದು ಅಂತ. ಅದು ಸುಲಭದ ಮಾತಲ್ಲ.

**◆ ಈ ತರಹದ ಕೆಲಸಗಳಲ್ಲಿ ತೊಡಗಿಕೊಳ್ಳಲು ನಿಮ್ಮನ್ನು ಉತ್ತೇಜಿಸಿದ್ದು ನಿಮ್ಮೊಳಗಿನ ಒತ್ತಡವೋ ಅಥವಾ ಹೊರಗಿನದೋ? ಅಥವಾ ನಿಮ್ಮ ಏಕಾಂಗಿತನಕ್ಕೆ ನೀವೇ ಕಂಡುಕೊಂಡ ಮದ್ದೋ?**

ನೀವು ಮನೋವಿಜ್ಞಾನ ಓದಿದ್ದೀರೋ ಇಲ್ಲವೋ ಗೊತ್ತಿಲ್ಲ. ಈ ಪ್ರಶ್ನೆಗೆ ಉತ್ತರ ಅವಷ್ಟೂ ಸೇರಿ ಆಗಿರುವಂಥದ್ದು.

**◆ ನೀವು ಕೃಷಿ ಹಿನ್ನೆಲೆಯ ಕುಟುಂಬದಿಂದ ಬಂದವರಲ್ಲವಾದರೂ ಅದಕ್ಕೆ ಸಂಬಂಧಿಸಿದ ಹೋರಾಟಗಳಲ್ಲಿ ಮುಂದಿರುತ್ತೀರಿ. ನೀರಿನ ಹೋರಾಟ, ರೈತ ಚಳವಳಿ... ಹೀಗೆ. ಕಳೆದ ವರ್ಷ ಒಂದು ತಿಂಗಳು ಬಳ್ಳಾರಿಯಲ್ಲಿ ಓಡಾಡಿ ರೈತರೊಡನೆ ಒಡನಾಡಿದ್ದೀರಿ. ಇತ್ತೀಚೆಗೆ ರೈತರ ಸಮಸ್ಯೆಗಳಿಗೆ ಸಂಬಂಧಪಟ್ಟ ಹಾಗೆ ಆಂಧ್ರಕ್ಕೂ ಹೋಗಿ ಬಂದಿರುವಿರಿ. ಇವೆಲ್ಲಾ ಯಾಕೆ ಮುಖ್ಯ ಅನಿಸ್ತು? ಚಳವಳಿಗಳು, ಸಮಾಜಮುಖಿ ಕಾರ್ಯಗಳು, ಸಾಹಿತ್ಯ ನಿಮ್ಮನ್ನು ಪೊರೆಯುತ್ತಿರುವ ಬಗೆಯಾದರೂ ಹೇಗೆ?**